ಬೆಳಸಿದವನು ಎಂದರ್ಥ) ಬೇರೆ ಇನ್ನೇನು ತಾನೆ ಮಾಡಿಯಾನು ಎಂಬ ಒಣಖಾರವನ್ನೂ ಅವರಮ್ಮ ಸೇರಿಸಿದ್ದರು. ಈ ಮಾತು ಕಾವಲುಗಾರನನ್ನೂ ಜಗಳಕ್ಕೆ ಆಹ್ವಾನಿಸಿತು. ನಾವು ಗುಡಿಸಲಿನಲ್ಲಿದ್ದ ಮಾತ್ರಕ್ಕೆ ಕೀಳು ಗುಣದವರು ಎಂದು ಹೇಗೆ ಹೇಳುತ್ತೀರಿ ಎಂದು ಆತ ಕೂಗಾಡಿಬಿಟ್ಟ.

ನಮ್ಮಮ್ಮ ನನ್ನನ್ನು ಒಳಕ್ಕೆ ಎಳೆದುಕೊಂಡು ಹೋಗಿ, ಯಾರ ಜೊತೆಯಲ್ಲಿ ನಾನು ಆಡುತ್ತೀನಿ ಎನ್ನುವುದರ ಬಗ್ಗೆ ಜಾಗ್ರತೆಯಿಂದಿರಬೇಕು ಎಂದು ಉಪನ್ಯಾಸ ನೀಡಿದಳು.

"ನಾವು ಬ್ರಾಹ್ಮಣರು ಅನ್ನೋ ಕಾರಣಕ್ಕೆ, ಮೆತ್ತಗಿರೋರು, ಎಲ್ಲಾ ಆಸ್ಪತ್ರೆ ಖರ್ಚು ಕೊಟ್ಟು ಬಿಡ್ತಾರೆ ಅಂದ್ಕೋತಾರೆ. ಹ್ಞೂಂ! ನಾವು ದೊಡ್ಡ ಶ್ರೀಮಂತರು ಅಂದ್ಕೊಡಿದಾರೆ. ಎರಡು ಹೊತ್ತಿಗೆ ನಿಭಾಯಿಸೋದರಾಗೆ ಹೆಣ ಬಿದ್ದು ಹೋಗುತ್ತೆ. ನಿಮ್ಮಪ್ಪನ್ನ ಮದುವೆ ಮಾಡಿಕೊಂಡಿದ್ದೇ ಬಂತು, ಎಲ್ಲಾ ಸುಖಗಳನ್ನ ಮರೆತು ಬಿಟ್ಟೀನಿ. ಒಂದು ನಾಟಕನಾ, ಒಂದು ಪುಸ್ತಕನಾ... ಕೇಳಬೇಡ."

ಎಲ್ಲಾ ಕಿರಿಕಿರಿಗಳನ್ನೂ ವಿಶೇಷವಾಗಿ ಕಲಬೆರಕೆ ಮಾಡುವ ಕಲೆ ಆಕೆಗೆ ಸಿದ್ಧಿಸಿತ್ತು. ಸಂಜೆ ಅಪ್ಪ ಮನೆಗೆ ಬಂದ ತಕ್ಷಣ, ಅತ್ಯಂತ ಕಹಿಯಾಗಿ ತನಗಾದ ಅವಮಾನಗಳನ್ನು ಹೇಳಿಕೊಂಡಳು. ನೆರೆಮನೆಯವರು ಎಷ್ಟು ಕೆಟ್ಟದ್ದಾಗಿ ತನ್ನನ್ನು ಕಂಡರು, ಕಾವಲುಗಾರನೂ ಹೇಗೆ ತನ್ನ ಮೇಲೆ ಕೂಗಾಡಿದ ಎಂದು ವರದಿಯೊಪ್ಪಿಸಿದಳು.

ನಮ್ಮಪ್ಪ ನನ್ನ ಮೇಲೆ ಎಗರಿಬಿದ್ದ. "ಸುಮ್ಮನೆ ಮನೆಯಾಗೆ ಕೂತು ಓದೋದಕ್ಕೆ ನಿಂಗೇನೋ ಕಷ್ಟ? ನಿನ್ನ ಮಾರ್ಕ್ಸ್ ನೋಡಿದ್ರೆ ಆ ಚಂದ! ನೂರಕ್ಕೆ ನೂರು ಬಂದು ಎಷ್ಟು ದಿನ ಆಯ್ತೋ? ಪೋಲಿ ಹುಡುಗರ ಜೊತೆ ಇಪ್ಪತ್ನಾಲ್ಕು ತಾಸು ಆಟ ಆಡ್ತಾ ಇದ್ರೆ ನೀನು ಏನಾದ್ರೂ ಸಾಧಿಸಲಿಕ್ಕೆ ಸಾಧ್ಯ ಏನೋ?" ಎಂದು ಕೋಲು ತೆಗೆದುಕೊಂಡು ಬಾರಿಸಿದ.

ಕೆಲವೇ ವಾರಗಳಲ್ಲಿ ಕಾವಲುಗಾರನ ಕುಟುಂಬ ಬೇರೆಲ್ಲಿಗೋ ಹೊರಟುಹೋಯ್ತು. ರಂಜಿತ್‌ನ ಅಪ್ಪಅಮ್ಮ ಅವನನ್ನು ಬೋರ್ಡಿಂಗ್ ಶಾಲೆಗೆ ಕಳುಹಿಸಿದರು. ನಾನೊಬ್ಬ ಮಾತ್ರ ಏಕಾಂಗಿಯಾಗಿ ಉಳಿದೆ. ನಾನು ಅಭ್ಯಾಸ ಮಾಡಲು ಸಾಕಷ್ಟು ಪ್ರಯತ್ನಿಸಿದೆ, ಆದರೆ ಬಹುಬೇಗನೆ ಅದು ಬೇಸರ ಮೂಡಿಸಿತು. ನಮ್ಮ ಓಣಿಯ ಹಿರಿಯ ಹುಡುಗರ ಜೊತೆ ಅಡ್ಡಾಡತೊಡಗಿದೆ. ಅವರೆಲ್ಲರೂ ಸಾಮಾನ್ಯವಾಗಿ ಸಂಜೀವನ ಮನೆಯ ಹತ್ತಿರ ಸೇರುತ್ತಿದ್ದರು.

ಸಂಜೀವ ಸ್ನೇಹಪರ ಸ್ವಭಾವದವನು. ಅವನಿಗೆ ವಾಟರ್ ಪೇಂಟಿಂಗ್ ಮಾಡುವುದೆಂದರೆ ಬಹಳ ಖುಷಿ. ಯಾವಾಗಲೂ ಅದರಲ್ಲಿ ತೊಡಗಿಕೊಂಡಿರುತ್ತಿದ್ದ. ನಾನು ಅದನ್ನು ನೋಡುತ್ತಿದ್ದೆ. ಆಗೊಮ್ಮೆ ಈಗೊಮ್ಮೆ ನನಗೂ ಬಣ್ಣ ಹಚ್ಚಲು ಕೊಡುತ್ತಿದ್ದ. ನನ್ನ ಬಣ್ಣದ ಆಯ್ಕೆ, ಗಾಢವಾಗಿ ಕುಂಚವನ್ನು ಆಡಿಸುವ ರೀತಿಯನ್ನು ಕಂಡು ನಗುತ್ತಿದ್ದ.

★★★

ರಿಚಿ ಕುಟುಂಬವು ನಮ್ಮ ಎದುರು ಮನೆಯವರಾಗಿ ಪ್ರವೇಶಿಸಿದ ನಂತರ ನಮ್ಮಮ್ಮ ಪರಿಚಯಿಸಿಕೊಳ್ಳುವ ಸಲುವಾಗಿ ಅವರ ಮನೆಗೆ ಭೇಟಿ ಕೊಟ್ಟು, ಕಂಗಾಲಾಗಿ ಹಿಂತಿರುಗಿದ್ದಳು. ರಿಚಿಯ ಅಪ್ಪ ಸಿಗರೇಟು ಸೇದುವುದು ಮತ್ತು ಅಮ್ಮ ಪಾಶ್ಚಾತ್ಯ ಉಡುಪುಗಳನ್ನು ಹಾಕುವುದು ಆಕೆಗೆ ಒಂದಿಷ್ಟೂ ಇಷ್ಟವಾಗಿರಲಿಲ್ಲ. ಒಂದು ತರಹ ನಾಸ್ತಿಕರಂತೆ ಕಾಣುವ ಅವರ ವರ್ತನೆಯೂ ಆಕೆಗೆ ಒಪ್ಪಿಗೆಯಾಗಿರಲಿಲ್ಲ. "ನಮ್ಮ ಓಣಿ ಹಾಳಾಗ್ತ ಅದೆ" ಎಂದು ಬೇಸರದಿಂದ ಹೇಳಿದ್ದಳು. "ನನ್ನ ಮಾತು ನೆನಪಿಟ್ಟುಗೊಳ್ರಿ. ಮುಂದಿನ ದಿನಗಳಲ್ಲಿ ಏನೂ ಒಳ್ಳೇದು ಆಗಲ್ಲ"